# ಫಾಸ್‌ಟ್ಯಾಗ್: ಹೀಗೂ ಬ್ಯಾಲೆನ್ಸ್ ತಿಳಿಯಿರಿ

ಫಾಸ್ಟ್ಯಾಗ್ ರೀಚಾರ್ಜ್ ಮಾಡುವುದು ಸಲೀಸಾದರೂ ಬ್ಯಾಲೆನ್ಸ್ ಚೆಕ್ ಮಾಡುವುದು ತುಸು ತ್ರಾಸದಾಯಕವಾದ ಕೆಲಸ. ಫಾಸ್ಟ್ಯಾಗ್ ನಿರ್ವಹಣೆ ಮಾಡುತ್ತಿರುವ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ಫಾಸ್ಟ್ಯಾಗ್ ಬಳಕೆ ಸಂಬಂಧಿತ ಸಂದೇಶಗಳನ್ನು ಮೊಬೈಲ್‌ಗೆ ರವಾನಿಸಿದರೂ ಅದೂ ತಕ್ಷಣವೇನೂ ಲಭ್ಯವಾಗುವುದಿಲ್ಲ. ಹೀಗಾಗಿ, ಫಾಸ್ಟ್ಯಾಗ್ ಬ್ಯಾಲೆನ್ಸ್ ತಿಳಿಯಲು ವಾಹನ ಸವಾರರು ಕಿರಿಕಿರಿ ಅನುಭವಿಸುತ್ತಿದ್ದಾರೆ.

ಕಿರಿಕಿರಿ ನಿವಾರಣೆಗೆ ಗೂಗಲ್ ಪೇ, ಫೋನ್‌ಪೇ ಹಾಗೂ ಪೇಟಿಯಂ ಸುಲಭದ ಮಾರ್ಗಗಳನ್ನು ಕಲ್ಪಿಸಿವೆ. ಈ ಡಿಜಿಟಲ್ ಪೇಮೆಂಟ್ ಆ್ಯಪ್‌ಗಳಲ್ಲಿ ಫಾಸ್ಟ್ಯಾಗ್ ರೀಚಾರ್ಜ್ ಮಾಡಬಹುದು ಗೊತ್ತಿರುವ ವಿಚಾರವಾದರೂ ಬ್ಯಾಲೆನ್ಸ್ ಪರಿಶೀಲಿಸುವುದು ಹೇಗೆ ಎಂಬುದು ಹಲವರಿಗೆ ಗೊತ್ತಿಲ್ಲ. ಈ ಬಗ್ಗೆ ಇಲ್ಲಿದೆ ಮಾಹಿತಿ.

**ಗೂಗಲ್ ಪೇ ಹಾಗೂ ಫೋನ್ ಪೇ:** ಮೊದಲು ಗೂಗಲ್ ಪೇ ಅಪ್ಲಿಕೇಷನ್ ತೆರೆಯಬೇಕು. ನಂತರ 'ರೀಚಾರ್ಜ್ ಮತ್ತು ಬಿಲ್ ಪಾವತಿ' ಟ್ಯಾಬ್ ಮೇಲೆ ಟ್ಯಾಪ್ ಮಾಡಬೇಕು. ಅಲ್ಲಿ 'ಫಾಸ್ಟ್ಯಾಗ್ ರೀಚಾರ್ಜ್' ಆಯ್ಕೆಯನ್ನು ಕ್ಲಿಕ್ಕಿಸಿ, ಬ್ಯಾಂಕ್ ಆಯ್ಕೆ ಮಾಡಿಕೊಳ್ಳಬೇಕು. ಬಳಿಕ ವಾಹನ ನೋಂದಣಿ ಸಂಖ್ಯೆಯನ್ನು ನಮೂದಿಸಿ, 'ವ್ಯೂ ಬ್ಯಾಲೆನ್ಸ್' ಬಟನ್ ಒತ್ತಿದರೆ ಮಾಹಿತಿ ಲಭ್ಯವಾಗುತ್ತದೆ.

**ಪೇಟಿಎಂ:** ಅಪ್ಲಿಕೇಶನ್ ತೆರೆದು, 'ಪೇ ಬಿಲ್ಸ್' ಆಯ್ಕೆ ಕ್ಲಿಕ್ಕಿಸಬೇಕು. ಬಳಿಕ 'ಫಾಸ್ಟ್ಯಾಗ್' ಆಯ್ಕೆಯನ್ನು ಒತ್ತಿ, ವಾಹನ ನೋಂದಣಿ ಸಂಖ್ಯೆಯನ್ನು ನಮೂದಿಸಬೇಕು. ನಂತರ 'ವ್ಯೂ ಬ್ಯಾಲೆನ್ಸ್' ಆಯ್ಕೆ ಒತ್ತಬೇಕು.

ಸದ್ಯ ಫಾಸ್ಟ್ಯಾಗ್ ಎಲ್ಲ ಟೋಲ್ ಸಂಗ್ರಹ ಕೇಂದ್ರಗಳಲ್ಲಿಯೂ ಲಭ್ಯವಿದ್ದು, ಈ ವ್ಯವಸ್ಥೆಯನ್ನು ಸವಾರರು ಅಳವಡಿಸಿಕೊಳ್ಳದಿದ್ದರೆ ದುಪ್ಪಟ್ಟು ಟೋಲ್ ಶುಲ್ಕ ಪಾವತಿಸಬೇಕಾಗುತ್ತದೆ. ಫಾಸ್ಟ್ಯಾಗ್ ಅನ್ನುವುದು ಒಂದು ಎಲೆಕ್ಟ್ರಾನಿಕ್ ಟೋಲ್ ಸಂಗ್ರಹ ವ್ಯವಸ್ಥೆಯಾಗಿದ್ದು, ರೇಡಿಯೊ ಫ್ರೀಕ್ವೆನ್ಸಿ ಐಡೆಂಟಿಫಿಕೇಷನ್ (ಆರ್‌ಎಫ್‌ಐಡಿ) ಪ್ರೋಗ್ರಾಂ ಆಧಾರದಲ್ಲಿ ಕಾರ್ಯನಿರ್ವಹಿಸುತ್ತದೆ. ಇದನ್ನು ವಾಹನದ ವಿಂಡ್‌ಸ್ಕ್ರೀನ್‌ಗೆ ಅಂಟಿಸಲಾಗುತ್ತದೆ. ಬ್ಯಾಂಕ್ ಖಾತೆ ಅಥವಾ ಪ್ರಿಪೇಯ್ಡ್ ಕಾರ್ಡ್‌ಗಳಿಗೆ ಇದನ್ನು ಲಿಂಕ್ ಮಾಡಿ, ಅದರಿಂದ ಟೋಲ್ ಶುಲ್ಕ ಕಡಿತವಾಗುವಂತೆ ಮಾಡಲಾಗುತ್ತದೆ. ■

## ಚಾಟ್‌ಜಿಪಿಟಿ ಲೋಕಕ್ಕೆ ಕಾಲಿಟ್ಟ ಆ್ಯಪಲ್



ಈಗಾಗಲೇ ಹಲವು ಟೆಕ್ ದೈತ್ಯ ಕಂಪನಿಗಳು ಚಾಟ್‌ಜಿಪಿಟಿ ತಂತ್ರಜ್ಞಾನ ಹೊರತಂದಿದ್ದು, ಆ ಸಾಲಿಗೆ ಈಗ ಆ್ಯಪಲ್ ಕಂಪನಿಯೂ ಸೇರಲಿದೆ. 'ಆ್ಯಪಲ್ ಜಿಪಿಟಿ' ತಂತ್ರಜ್ಞಾನದ ಅಭಿವೃದ್ಧಿಯತ್ತ ಹೆಜ್ಜೆ ಇಟ್ಟಿರುವ ಆ್ಯಪಲ್ ಕಂಪನಿಯು ಸದ್ಯ ಬಳಕೆಯಲ್ಲಿರುವ ಎಲ್ಲ ಮಾದರಿಯ ಚಾಟ್‌ಜಿಪಿಟಿ ತಂತ್ರಜ್ಞಾನಕ್ಕೆ ಸಡ್ಡು ಹೊಡೆಯುವ ನಿರೀಕ್ಷೆಯನ್ನು ಹುಟ್ಟುಹಾಕಿದೆ.

ಆ್ಯಪಲ್ ಕಂಪನಿಯು ತನ್ನದೇ ಆದ ಅಜಾಕ್ಸ್ ಎಂಬ ಫ್ರೇಮ್ ವರ್ಕ್ ಹೊಂದಿದ್ದು, ಅದಕ್ಕಾಗಿ ಲಾರ್ಜ್ ಲ್ಯಾಂಗ್ವೇಜ್ ಮಾಡೆಲ್‌ಗಳನ್ನು ಸೃಷ್ಟಿಸಲಿದೆ. ಈಗಾಗಲೇ ತಾನು ಬಳಸುತ್ತಿರುವ ಅನೇಕ ಸೇವೆಗಳಿಗೆ ಎಐ ತಂತ್ರಜ್ಞಾನವನ್ನು ಬಳಸುತ್ತಿದ್ದು, ಈಗ ತನ್ನದೇ ಚಾಟ್‌ಬಾಟ್ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ತೊಡಗಿದೆ. ■

# ಸುದ್ದಿ ಬರೆಯಲಿದೆ ಜೆನೆಸಿಸ್

ಚಾಟ್‌ಜಿಪಿಟಿಯಂತಹ ತಂತ್ರಜ್ಞಾನ ಟೆಕ್‌ಲೋಕದಲ್ಲಿ ಬಿರುಗಾಳಿ ಎಬ್ಬಿಸಿರುವಾಗಲೇ, ನಿಖರವಾಗಿ ಸುದ್ದಿ, ಲೇಖನ ಬರೆಯುವಂತಹ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನವನ್ನು ಗೂಗಲ್ ಸಿದ್ಧಪಡಿಸತೊಡಗಿದೆ. ಈ ಬಗ್ಗೆ ಮಾಹಿತಿ ಹಂಚಿಕೊಂಡಿರುವ ಗೂಗಲ್, ಸುದ್ದಿ, ಲೇಖನ ಬರೆಯುವ ಎಐ ತಂತ್ರಜ್ಞಾನವನ್ನು ಸದ್ಯ ಪ್ರಾಯೋಗಿಕ ಪರೀಕ್ಷೆಗೆ ಒಳಪಡಿಸಲಾಗಿದೆ ಎಂದಿದೆ.

ಗೂಗಲ್‌ನ ಈ ತಂತ್ರಜ್ಞಾನವನ್ನು ದಿ ನ್ಯೂಯಾರ್ಕ್ ಟೈಮ್ಸ್, ದಿ ವಾಷಿಂಗ್ಟನ್ ಪೋಸ್ಟ್, ದಿ ವಾಲ್‌ಸ್ಟ್ರೀಟ್‌ನಂತಹ ದಿಗ್ಗಜ ಮಾಧ್ಯಮ ಸಂಸ್ಥೆಗಳಿಗೆ ಒದಗಿಸಲಿದೆ. ಈ ತಂತ್ರಜ್ಞಾನಕ್ಕೆ ಕಂಪನಿಯು ಜೆನೆಸಿಸ್ ಎಂದು ಹೆಸರಿಟ್ಟಿದ್ದು, ಇದು ಕಂಪನಿಯ ಆಂತರಿಕ ಬಳಕೆಯ ಹೆಸರಾಗಿರಲಿದೆ. ಸುದ್ದಿ ಬೆಳವಣಿಗೆಯ ಅಂಶಗಳು ಹಾಗೂ ಲೇಖನದ ವಿಷಯವನ್ನು ಪಡೆದು ಅದನ್ನು ಸುದ್ದಿಯನ್ನಾಗಿ ಮಾರ್ಪಡಿಸಿ ಸುದ್ದಿ ಹಾಗೂ ಲೇಖನದ ರೂಪದಲ್ಲಿ ನೀಡುವುದು ಇದರ ಕಾರ್ಯವಾಗಿರಲಿದೆ.

ಇಂತಹ ತಂತ್ರಜ್ಞಾನದಿಂದ ಪತ್ರಕರ್ತರ ಉದ್ಯೋಗಕ್ಕೆ ಕುತ್ತುಬರುವ ಸಾಧ್ಯತೆ ಇದೆ ಎಂಬ ವಿಚಾರ ಚರ್ಚೆಯಲ್ಲಿದೆ. ಆದರೆ ಗೂಗಲ್ ಅಭಿವೃದ್ಧಿಪಡಿಸುತ್ತಿರುವ ಎಐ, ಪತ್ರಕರ್ತರ ಸಹಾಯಕನಂತೆ ಕಾರ್ಯನಿರ್ವಹಿಸಲಿದೆ. ಆಟೊಮೇಷನ್ ಮೂಲಕ ಸಮಯ ಉಳಿತಾಯ ಮಾಡಲಿದೆ ಎಂಬುದು ಮತ್ತೊಂದು ವಾದ.

ಜೆನೆಸಿಸ್ ಅಭಿವೃದ್ಧಿಗೆ ತಮ್ಮ ಸುದ್ದಿ ಹಾಗೂ ಲೇಖನಗಳನ್ನು ಬಳಸಿಕೊಳ್ಳದಂತೆ ಅನೇಕ ಸುದ್ದಿ ಸಂಸ್ಥೆಗಳು ಗೂಗಲ್‌ಗೆ ತಾಕೀತು ಮಾಡಿವೆ. ಸುದ್ದಿ ಹಾಗೂ ಲೇಖನಗಳನ್ನು ಹಂಚುವ ಕೆಲಸ ಮಾಡುವ ಗೂಗಲ್ ಅದರಿಂದ ಬರುವ ಆದಾಯವನ್ನು ಸುದ್ದಿ ಸಂಸ್ಥೆಗಳಿಗೆ ನೀಡುತ್ತಿಲ್ಲ ಎಂಬುದು ಇದಕ್ಕೆ ಕಾರಣವಾಗಿದೆ. ■

